ಶ್ರೀ ವಿ. ಎಸ್. ಕೌಜಲಗಿ.—೨೬-೨-೭೧ ರಲ್ಲಿ ಇದರ ಕಾರ್ಯ ನಿರ್ವಹಿಸಲು ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರಿಗೆ ಅಧಿಕಾರ ಕೊಡಲಾಗಿದೆ, ಇದಕ್ಕೆ ಸಂಬಂಧಪಟ್ಟ ಆಜ್ಞೆ ಆಗಿದೆ. ಅಂದಿನಿಂದ ಇಲ್ಲಿಯವರೆಗೆ ಅಲ್ಲಿಯ ಸಿಬ್ಬಂದಿ ರೆಕ್ರೂಟ್‌ಮೆಂಟ್ ಆಗಿದೆ. ಈ ಕೆಲಸವನ್ನು ೭-೭-೭೨ ರಿಂದ ಪೂರ್ತಿ ಚಾಲೂ ಮಾಡಿದೆ.

ಶ್ರೀ ಜೆ. ಎಲ್. ಕಬಾಡಿ.—ಅಲ್ಲಿರುವ ಆಫೀಸರು ಯಾರು ? ಅಲ್ಲಿ ಯಾವ ಆಫೀಸರನ್ನೂ ನೇಮಿಸದಿದ್ದರೆ ಗ್ರಂಥಾಲಯ ನಡೆಸುವುದು ಹೇಗೆ ?

ಶ್ರೀ ವಿ. ಎಸ್. ಕೌಜಲಗಿ.—ಅಲ್ಲಿ ಪೂರ್ವಭಾವಿ ಕೆಲಸ ಪ್ರಾರಂಭವಾಗಿದೆ. ೭-೭ ೭೨ ರಿಂದ ಅಲ್ಲಿ ಕೆಲಸ ನಡೆಯುತ್ತಿದೆ. ಚೀಫ್ ಲೈಬ್ರೇರಿಯನ್ ನೇಮಿಸಿದ ಮೇಲೆ ಅವರ ಕೈಕೆಳಗೆ ಅಲ್ಲಿನ ನೌಕರರು ಕೆಲಸ ಮಾಡುವರು.

ಶ್ರೀ ಬಾಪುಗೌಡ ರಾಯಪ್ಪ.—ಬಿಜಾಪುರದಲ್ಲಿ ತೆರೆಯಲಿರುವ ಗ್ರಂಥಾಲಯದ ರೆಕರಿಂಗ್ ಮತ್ತು ನಾನ್ ರೆಕರಿಂಗ್ ವೆಚ್ಚವೆಷ್ಟು ?

ಶ್ರೀ ವಿ. ಎಸ್. ಕೌಜಲಗಿ.—ನೋಟೀಸ್.

ಶ್ರೀ ಜೆ. ಎಲ್. ಕಬಾಡಿ.—ಜುಲೈ ೧೯೭೨ ರಿಂದ ಸಿಬ್ಬಂದಿ ಕೆಲಸ ಮಾಡುತ್ತಿದೆ ಎಂದು ಹೇಳಿದರು. ಎಲ್ಲಿಯಾರ ಕೈಕೆಳಗೆ ಕೆಲಸ ಮಾಡುತ್ತಿದೆ ? ಅಲ್ಲಿ ಅಧಿಕಾರಿಯೇ ಇಲ್ಲ. ಅವರಿಗೆ ಸಂಬಳ ಕೊಡುವವರು ಯಾರು ?

ಶ್ರೀ ವಿ. ಎಸ್. ಕೌಜಲಗಿ.—ಉತ್ತರದಲ್ಲೇ ಅದನ್ನು ತಿಳಿಸಿದೆ. ೨೬-೨-೭೧ ರಿಂದ ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರಿಗೆ ಆಥರೈಜ್ ಮಾಡಲಾಗಿದೆ. ಜಿ.ಓ. ನಂ. ಇಡಿ ಎಸ್‌ಎಲ್ ೭೧, ತಾರೀಖು ೨೬ನೇ ಫೆಬ್ರುವರಿ ೭೧. ಅವರು ಅಲ್ಲಿನ ಕೆಲಸ ನೋಡಿಕೊಳ್ಳುವರು.

ಶ್ರೀ ಎಂ ಎಚ್. ಜಯಂಪ್ರಕಾಶ್ ನಾರಾಯಣ್.—ಅಲ್ಲಿ ಸಿಬ್ಬಂದಿ ವರ್ಗ ನೇಮಕ ಮಾಡಲು ಅನುಮತಿ ನೀಡಿದ್ದೀರಾ ? ನೇಮಿಸಿದ್ದರೆ ಸಿಬ್ಬಂದಿ ವಿವರವೇನು ? ಸಿಬ್ಬಂದಿ ಭರ್ತಿ ಮಾಡುವಾಗ ಸರಕಾರದ ನಿಯಮದ ಪ್ರಕಾರ ಹುದ್ದೆಗಳ ಕ್ಲಾಸಿಫಿಕೇಷನ್ ಮಾಡಿ ಯಾರು ಯಾರಿಗೆ ಎಷ್ಟು ಭಾಗ ಕೊಡಬೇಕು ಎಂದು ನಿಯಮದ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟಿನವರು ಮುಂತಾದವರಿಗೆ ಪರ್ಸೆಂಟೇಜ್ ಕೊಡಲಾಗಿದೆಯೇ ? ಅದರ ಪ್ರಕಾರ ಭರ್ತಿ ಮಾಡಬೇಕೆಂದು ತಿಳಿಸಲಾಗಿದೆಯೇ ?

ಶ್ರೀ ವಿ. ಎಸ್. ಕೌಜಲಗಿ.—ಈಗ ಹಂಗಾಮಿಯಾಗಿ ಹುದ್ದೆಗಳನ್ನು ಭರ್ತಿಮಾಡಿದೆ.

ಅಧ್ಯಕ್ಷರು —ಶ್ರೀ ಬಿ. ಜಿ. ಬಣಕಾರ್‌ರವರು ಪ್ರಶ್ನೆ ನಂ. ೭೦೬ ಹಾಕುವುದಕ್ಕೆ ಅನುಮತಿ ನೀಡಲಾಗಿದೆ. ಅವರು ಪ್ರಶ್ನೆ ಹಾಕಬಹುದು.

SALARY OF PATELS

SRI B. G. BANAKAR (Hirekerur).—On behalf of.

706. SMT. C. NAGAMMA KESAVAMURTHY (Davangere).—Will the Minister for Revenue be pleased to state.

(*a*) the difference between the potige paid to the patels of old Mysore area and the salary paid to the patels having same status in Bellary area ;

(*b*) whether the Government have thought of fixing uniform amount in this behalf ;

(c) if not, the type of action that would be taken in this behalf ?

SRI N. HUTCHAMASTHY GOWDA (Minister for Revenue).—

(a) The potige paid to Patels of old Mysore area was depending upon the total amount of land revenue of the respective village. The Patels (Village Munsiffs) in Bellary area are in receipt of salary of Rs. 27 P.M. (Rs. 22+5).

(b) Yes.

(c) Does not arise in view of reply to clause (b).

ಶ್ರೀ ಬಿ. ಜಿ. ಬಣಕಾರ.—ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲಿ ಪಟೇಲರಿಗೆ ಒಂದೇ ರೀತಿಯ ವೇತನ ಕೊಡುತ್ತಿದ್ದೀರಾ ? ಹಾಗಿಲ್ಲದಿದ್ದರೆ ಎಲ್ಲ ಕಡೆಯೂ ಏಕರೀತಿಯ ವೇತನ ಕೊಟ್ಟು ಪಟೇಲರ ಸ್ಥಾನಮಾನ ಮತ್ತು ಗೌರವವನ್ನು ಉಳಿಸಲು ಅವಕಾಶ ಮಾಡಲಾಗುವುದೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದೊಂದು ಭಾಗದಲ್ಲಿ ಒಂದೊಂದು ರೀತಿ ಇದೆ. ಹಳೇ ಮೈಸೂರು ಭಾಗದಲ್ಲಿ ಜಮಾಬಂದಿ ಆಧಾರದ ಮೇಲೆ, ಕಂದಾಯದ ಆಧಾರದ ಮೇಲೆ ಪೋಟಿಗೆ ಕೊಡುವರು. ಮೊದಲನೆಯ ಒಂದು ಸಾವಿರ ರೂಪಾಯಿ ಜಮಾಬಂದಿಗೆ ಶೇಕಡ ೩ ರಂತೆ, ಒಂದು ಸಾವಿರದಿಂದ ೨ ಸಾವಿರ ರೂಪಾಯಿವರೆಗಿನ ಜಮಾಬಂದಿಗೆ ಶೇಕಡ ೨ ರಂತೆ, ಮತ್ತು ಎರಡು ಸಾವಿರ ರೂಪಾಯಿಗೆ ಮೇಲ್ಪಟ್ಟ ಜಮಾಬಂದಿಗೆ ಶೇಕಡ ಒಂದರಂತೆ ಪೋಟಿಗೆ ಕೊಡಲಾಗುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ ೨೨ ರೂ. ಸಂಬಳ ಮತ್ತು ೫ ರೂಪಾಯಿ ಡಿ. ಎ. ಸೇರಿ ಒಟ್ಟು ೨೭ ರೂಪಾಯಿ ತಿಂಗಳಿಗೆ ಕೊಡುವರು. ಎಲ್ಲ ಕಡೆಯೂ ಏಕ ರೀತಿಯ ವ್ಯವಸ್ಥೆ ಮಾಡಬೇಕೆಂಬ ಉದ್ದೇಶವಿದೆ.

ಶ್ರೀ ಬಿ. ಜಿ. ಬಣಕಾರ.—ಎಷ್ಟು ದಿವಸಗಳಲ್ಲಿ ಏಕರೂಪವಾದ ವ್ಯವಸ್ಥೆ ಜಾರಿಗೆ ಬರುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಲ್ಯಾಂಡ್ ರೆವೆನ್ಯೂ ಆಕ್ಟ್ ಪರಿಮಿತಿಯಲ್ಲಿ ಬರಬೇಕೆಂಬ ಉದ್ದೇಶವಿದೆ, ಅದಕ್ಕೆ ಒಂದು ಮಸೂದಾಕಾನೂನನ್ನು ತರಬೇಕಾಗಿದೆ. ಆ ಮೂಲಕ ಆದಷ್ಟು ಬೇಗ ಏಕರೂಪವಾದ ವ್ಯವಸ್ಥೆ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಜಿ. ಹಾಲಪ್ಪ.—ಈಗ ಹಿಂದಿದ್ದ ಶಾನುಭೋಗರನ್ನು ತೆಗೆದು ಅವರಿಗೆ ಪರಿಹಾರ ಕೊಡುವಂತೆ ಪಟೇಲರ ಹುದ್ದೆ ಆನುವಂಶಿಕವಾಗಿರುವುದನ್ನು ತೆಗೆದರೆ ಅವರಿಗೂ ಪರಿಹಾರ ಕೊಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಆನುವಂಶಿಕ ಹುದ್ದೆಯಾದ ಶ್ಯಾನುಭೋಗರ ಹುದ್ದೆಯನ್ನು ತೆಗೆದುಹಾಕಿರುವಂತೆ ಪಟೇಲರ ಮತ್ತು ತೋಟಿ ತಳವಾರರ ಹುದ್ದೆಗಳನ್ನೂ ತೆಗೆದು ಹಾಕಿದೆ, ಆದರೆ ಪಟೇಲರ ಮತ್ತು ತೋಟಿ ತಳವಾರರ ಹುದ್ದೆಗಳನ್ನು ೩೧-೧೨-೭೧ರ ವರೆಗೆ ಮುಂದುವರೆಸಿತ್ತು. ಈಚೆಗೆ ಅವಶ್ಯಕವಾದ ಕ್ರಮ ಕೈಗೊಳ್ಳದಿರುವುದರಿಂದ ಈ ಹುದ್ದೆಗಳನ್ನು ಈ ವರ್ಷ ಡಿಸೆಂಬರ್ ೩೧ರ ವರೆಗೆ ಮುಂದುವರಿಸಬೇಕೆಂದು ತೀರ್ಮಾನವಾಗಿ ಅದಕ್ಕೆ ರಾಷ್ಟ್ರಾಧ್ಯಕ್ಷರ ಒಪ್ಪಿಗೆ ದೊರೆತಿದೆ. ಈ ಅವಧಿಯೊಳಗೆ ಮುಂದಿನ ಕ್ರಮ ಕೈಕೊಳ್ಳಬೇಕಾಗಿದೆ.

ಶ್ರೀ ಪಟೇಲ್ ಪಾಪಾನಾಯಕ್.—ಪಟೇಲರಿಗೆ ಏಕರೂಪವಾಗಿ ತಿಂಗಳ ಸಂಬಳ ಕೊಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಿನ್ನೂ ತೀರ್ಮಾನವಾಗಿಲ್ಲ.

ಶ್ರೀ ಎಚ್. ಬಿ. ಕೆಂಚೇಗೌಡ.—ಪಟೇಲರ ಆನುವಂಶಿಕ ಹುದ್ದೆ ತೆಗೆದುಹಾಕಿದ ಮೇಲೆ ಶ್ಯಾನುಭೋಗರಿಗೆ ಕೊಟ್ಟಂತೆ ಪಟೇಲರಿಗೂ ಪರಿಹಾರ ಕೊಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದೂ ಆಲೋಚನೆಯಲ್ಲಿದೆ.

ಶ್ರೀ ಎನ್. ಜಿ. ಹಾಲಪ್ಪ.—ಶಾನುಭೋಗರಿಗೆ ಸಂಬಳ ಕೊಡುವ ಹಾಗೆ ಪಟೇಲರಿಗೂ ಕೊಡುವಂತೆ ಹೈಕೋರ್ಟಿನಲ್ಲಿ ತೀರ್ಮಾನವಾಗಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಜಾಸ್ತಿ ಕೊಡಬೇಕೆಂದು ತೀರ್ಮಾನವಾಗಿದೆ. ಪಟೇಲರ ಹಕ್ಕು ಎಷ್ಟಿದೆ, ಅವರ ಕೆಲಸಕಾರ್ಯವೆಷ್ಟು, ಗ್ರಾಮದಲ್ಲಿ ಅವರ ಕೆಲಸವೆಷ್ಟಿದೆ ಎಂಬುದು ನಿರ್ಧಾರವಾಗಿಲ್ಲ. ಆದುದರಿಂದ ಅದನ್ನೆಲ್ಲಾ ಪರಿಶೀಲಿಸಿ ಸರಕಾರ ತೀರ್ಮಾನ ಮಾಡುವುದು.

ಶ್ರೀ ಬಿ. ಜಿ. ಬಣಕಾರ್.—ಪಟೇಲರು, ತೋಟಿ ತಳವಾರರು ಮುಂತಾದವರ ಬಗ್ಗೆ ಸರಕಾರದ ಧೋರಣೆಯೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗ್ರಾಮ ನೌಕರರ ಬಗ್ಗೆ ಈ ವರ್ಷದ ಆಖೈರಿನೊಳಗೆ ಒಂದು ತೀರ್ಮಾನವಾಗಬೇಕಾಗಿದೆ. ಈ ವರ್ಷದ ಕೊನೆಯವರೆಗೆ ಅವರನ್ನು ಮುಂದುವರೆಸುತ್ತೇವೆ.

PROMOTION OF DRAUGHTSMEN IN PUBLIC WORKS DEPARTMENT

781 Sri A G KODAGI. (Baindur) Will the Minister of Public Works and Electricity be plased to state.—

(*a*) the total strength of Draughtsmen in Public Works Department.

(*b*) of th m the number of Draughtsmen promoted to the posts of Assistant Engineers in the ratio of 7: 1 vacancies, reserved for Junior Engineers (Non-graduates) and Draughtsmen respectively as per Government Order No. PWD 557 SPG 66 dated 12th June 1969?

SRI H. M. CHANNABASAPPA.—(Minister for Public Works)

(*a*) 936.

(*b*) Nill. The matter is under consideration.

SRI A. G. KODAGI:—In reply to (b) it is stated that the matter is under consideration may I know the reason for not following the Government Order?

† SRI H. M. CHANNABASAPPA.—The Cadre and Recruitment Rules will have to be properly changed and the changing of the Rules is under consideration.

SRI A. G. KODAGI.—Is there any disadvantage to the Department if a common designation is givien to the Diploma Engineers working as Junior Engineers (Non-Graduates) and Draughtsmen who are on the same scale of pay as has been done in M. S.E. B.?

SRI H. M. CHANNABASAPPA.—M. S. E. B is functioning on a different footing and the Government is functioning on a different footing. It would not be correct to equate them.

ಶ್ರೀ ಎ. ಬಿ. ರಾಮಸ್ವಾಮಿ.—ಸ್ವಾಮಿ (ಅ) ಗೆ ಉತ್ತರವಾಗಿ ಡ್ರಾಫ್ಟ್‌ಮನ್‌ಗಳಿಗೆ ೫೩ ಜನಕ್ಕೆ ಬಡ್ತಿ ಕೊಟ್ಟೀದ್ದೇವೆ ಎಂದು ಹೇಳಿದ್ದೀರಿ. ಇದರಲ್ಲಿ ಹರಿಜನ ಮತ್ತು ಗಿರಿಜನರು ಎಷ್ಟು ಇದ್ದಾರೆಂದು ತಿಳಿಸುತ್ತೀರಾ?